ಚಿಕ್ಕಮಗಳೂರು ಜಿಲ್ಲೆ ತರೀಕೆರೆಯ ಕಲೀಮ್ ಉಲ್ಲಾ, ಪ್ರಸ್ತುತ ಶಿವಮೊಗ್ಗದಲ್ಲಿ ಕನ್ನಡ ಅಧ್ಯಾಪಕರು. 'ಪ್ರಜಾವಾಣಿ'ಯಲ್ಲಿ ಪ್ರಕಟಗೊಂಡ 'ಕ್ಲಾಸ್ ಟೀಚರ್' ಅಂಕಣ ಬರಹಗಳ ಮೂಲಕ ಸಹೃದಯರಿಗೆ ನಿಕಟವಾದ ಈ ಕನ್ನಡ ಮೇಷ್ಟ್ರು, ಪ್ರಸ್ತುತ ಕಾಡಿನೊಳಗೂ ಹೊರಗೂ ಸುಳಿದಾಡುತ್ತಿದ್ದಾರೆ; ಕ್ಯಾಮೆರಾ ಕಣ್ಣಿನ ಮೂಲಕ ತಾವು ಕಂಡ ಕಥನಗಳನ್ನು 'ಮಯೂರ'ದ ಓದುಗರಿಗೆ ದಾಟಿಸುತ್ತಿದ್ದಾರೆ. ಪೂರ್ಣಚಂದ್ರ ತೇಜಸ್ವಿ ಅವರ 'ಪರಿಸರದ ಕಥೆಗಳು' ಕಥನಗಳ ಮುಂದುವರಿಕೆಯಂತಿರುವ ಕಲೀಮ್ ಅವರ 'ಕಾಡಿಗೆ ಕಣ್ಣು' – ಮನುಷ್ಯಜಗತ್ತು ಮತ್ತು ವನ್ಯಜಗತ್ತನ್ನು ಮುಖಾಮುಖಿಯಾಗಿಸುವ ವಿಶಿಷ್ಟ ಪ್ರಯತ್ನ.

ಭೀತಿ ಹುಟ್ಟಿಸುತ್ತಲೇ ಇರುತ್ತವೆ. ಅತಂಕ, ಅನುಮಾನ, ಹಾಗೂ ಜೀವಭಯದ ಕಾರಣ ವಲಸೆ ಪಕ್ಷಿಗಳು ಸದಾ ಎಚ್ಚರದ ಮೂಡಿನಲ್ಲಿ ಇರುತ್ತವೆ.

ನಮಗೂ ಪಕ್ಷಿಗಳ ಇರುವಿಕೆಯ ನಡುವೆಯೂ ಅನಾಯಾಸವಾಗಿ ಹರಡಿದ್ದ ಪಾಯಸದಂತಹ ಕೆಸರು ನಮ್ಮ ನೆಮ್ಮದಿ ಕೆಡಿಸಿತ್ತು. ಹೀಗಾಗಿ ಅನಿವಾರ್ಯವಾಗಿ ತೆವಳುತ್ತಲೇ ಹೋಗಿ ಊರ ಎಮ್ಮೆಗಳಂತೆ ಕೆಸರಲ್ಲಿ ಪವಡಿಸಬೇಕಿತ್ತು. ರಾತ್ರಿ ಅರೆಬರೆ ನಿದ್ದೆ ಪೂರೈಸಿ ಬೆಳಗಿನ ಅರೆಗತ್ತಲಲ್ಲೇ ಎದ್ದು ಹಾವಿನಂತೆ ಒಳುಕಾಡಿ ಹೋಗಿ ಕೆಸರ ಗುಂಡಿಯಲ್ಲಿ ಹುದುಗುವುದು ಸರಳ ಕೆಲಸವಾಗಿರಲಿಲ್ಲ. ಜೊತೆಗೆ ಕೋಮಲ ಮೈಕಟ್ಟಿನ ಕ್ಯಾಮೆರಾ ಮತ್ತು ಸೂಕ್ಷ್ಮ ಸ್ವಭಾವದ ಲೆನ್ಸಿನ ಮುಸುಡಿಗೆ ಕಿರುರಾಡಿಯೂ ತಾಗದಂತೆ ಜೋಪಾನ ಮಾಡುವುದು ಕೂಡ ದುಸ್ತರದ ಕೆಲಸ.

ಅಂತೂ ಏನೇನೋ ಸರ್ಕಸ್ ಮಾಡಿ ಗೊಣಗಾಡಿಕೊಂಡು ಹೋಗಲ್ಲಿ ನೆಲೆಯಾಗಿದ್ದು ಲಾಸೇನೂ ಆಗಲಿಲ್ಲ. ಹದಿನೈದು ನಿಮಿಷ ಪಟ ತೆಗೆಯುವ ಅವಕಾಶ ಸಿಕ್ಕಿದ್ದು ಖುಷಿ ಕೊಟ್ಟಿತು. ನೀರಲ್ಲಿ ತಮ್ಮ ಮಾರುದ್ದದ ನೀಳ ಕೊಕ್ಕುಗಳ ಮುಳುಗಿಸಿ ನಾಜೂಕಾಗಿ ಹುಳಹುಪ್ಪಟೆ ಕೆದಕಿ ಹುಡುಕುವ ಅವುಗಳ ಚಟುವಟಿಕೆಗಳನ್ನು ಸಮೀಪದಿಂದ ನೋಡುವುದೇ ಒಂದು ಸೌಭಾಗ್ಯ. ಪ್ರಕೃತಿ ಇವುಗಳಿಗೆ ಎಂತಹ ಅದ್ಭುತ ಪರಿಣತಿ ಮತ್ತು ಸೂಕ್ಷ್ಮಗಳನ್ನು ಕಲಿಸಿದೆ! ಆದರೆ ಇಲ್ಲೂ ನಮ್ಮಂತೆ ನಿದ್ರೆಗೆಟ್ಟ ಕೆಲವು ಸೋಂಬೇರಿ ಪಕ್ಷಿಗಳು ಇದ್ದವು. ಅವು ತಮ್ಮ ಉದ್ದ ಒಂಟಿ ಕೆಂಗಾಲಿನ ಮೇಲೆ ಭಾರ ಹಾಕಿ ಕೊಕ್ಕನ್ನು ಪುಕ್ಕದೊಳಗೆ ತುರುಕಿ ಸುಖಾತ್ತಾಗಿ ನಿದ್ದೆ ಬಾರಿಸುತ್ತಿದ್ದವು. ಈ ರಾಜಹಂಸ ಗಂಡು–ಹೆಣ್ಣು ಖಗಗಳು ಪರಸ್ಪರ ಪ್ರೀತಿಯಿಂದ ಗುಟುಕು ತಿನ್ನಿಸುವ ಪ್ರೇಮಸಲ್ಲಾಪದ ದೃಶ್ಯಗಳು ವಿಶೇಷ ಆಕರ್ಷಣೆಯಾಗಿ ಕಾಣುತ್ತಿದ್ದವು.

ಈ ಫ್ಲೆಮಿಂಗೋ ಹಕ್ಕಿಗಳ ಖುಲ್ಲಂಖುಲ್ಲಾ ಹನಿಮೂನ್ ಪ್ರಕರಣಗಳನ್ನು ಬೆಳ್ಳಂಬೆಳಗ್ಗೆ ಪುಕ್ಕಟ್ಟೆಯಾಗಿ ಚಿತ್ರಿಸುತ್ತಿದ್ದ ನಮ್ಮ ಇರುವಿಕೆಯನ್ನು ಅದು ಹೇಗೋ ರಾಜಹಂಸಗಳು ಕ್ಷಣಾರ್ಧದಲ್ಲಿ ಪತ್ತೆ ಹಚ್ಚಿದವು. ಪ್ರಾಯಶಃ ನಮ್ಮ ತಂಡದ ಯಾರೋ ತಲೆಯೋ, ಕೈ ಕಾಲೋ ಅಲ್ಲಾಡಿಸಿರುವುದನ್ನು ಅವು ಗಮನಿಸಿರಬೇಕು. ಅಂಥ ಸಂದರ್ಭಗಳಲ್ಲಿ ನಾಯಕ ತಕ್ಷಣ ಒಂದು ಎಚ್ಚರಿಕೆಯ ಕೂಗನ್ನು ಗುಂಪಿಗೆ ಕೊಡುತ್ತಾನೆ. ಉಳಿದವು ತಡಮಾಡದೆ ಸೂಚನೆ ಸಿಕ್ಕ ಕೂಡಲೇ ಜಾಗ್ರತಗೊಂಡು ಒಟ್ಟಿಗೆ ಬುರ್ರೆಂದು ಹಾರಿ ಬಿಡುತ್ತವೆ. ಈಗಲೂ ಹಾಗೇ ಆಯಿತು.

ಇವು ಹಾರುವಾಗ ಫ್ಲೇಟ್ ವಿಮಾನದ ಮಾದರಿಯನ್ನೇ ಅನುಸರಿಸುತ್ತವೆ. ಅದ್ಯಾಕೆ ಹೀಗೆ ಹೇಳುವುದು! ವಿಮಾನ ತಯಾರಿಸಿದವರೇ ಇದರ ಟೇಕಾಫ್ ಮಾದರಿಯನ್ನು ಕಾಪಿ ಮಾಡಿದ್ದಾರೆ ಎಂದರೆ ಸರಿಯಾಗಬಹುದಲ್ಲವೇ? ಮೊದಲು, ನೀರ ಮೇಲೆ ಸ್ವಲ್ಪ ದೂರ ರನ್ ವೇನಲ್ಲಿ ವಿಮಾನ ಓಡುವಂತೆ ಇವು ವೇಗವಾಗಿ ಓಡುತ್ತವೆ. ನಂತರ ನೇರ ಹಾರಿ ಮತ್ತೆ ಒಮ್ಮೆಗೇ ತಿರುಗಿ ಗುಂಪಾಗಿ ಚಲಿಸುತ್ತವೆ. ತಾವು ಹೋಗಬೇಕಾದ ದಿಕ್ಕಿಗೆ ವಿರುದ್ಧವಾಗಿ ಮೊದಲು ಹಾರುವುದು ಇವುಗಳ ಸ್ವಭಾವ. ಈ ಕ್ರಮದಲ್ಲೂ ಏನೋ ಒಂದು ನಮಗೆ ಗೊತ್ತಿಲ್ಲದ ತತ್ವ ಅಡಗಿರಲೇಬೇಕು. ಪ್ರಕೃತಿ ಕಲಿಸಿದ ಪಾಠವನ್ನು ಮರೆಯದೆ ಪಾಲಿಸುವ ಹಕ್ಕಿಗಳು ಎಂದಿಗೂ ಮನುಷ್ಯನಂತೆ ಅಡ್ಡಾದಿಡ್ಡಿಯಾಗಿ, ಅಡ್ನಾಡಿಯಾಗಿ ನಡೆದುಕೊಳ್ಳುವುದಿಲ್ಲ.

ಹೀಗೆ ತೇಲಿಹೋದ ಫ್ಲೆಮಿಂಗೋ ಹಕ್ಕಿಗಳು ಒಂದು ಮೈಲಿ ಆಚೆಗಿನ ದಡದಲ್ಲಿ ಇಳಿದವು. ನಾವಲ್ಲಿಗೆ